ಸಂತ ಫ್ರಾನ್ಸಿಸ್ ಕಾಲೇಜು: ಆನ್‌ಲೈನ್ ಇಂಟರ್ನ್‌ಶಿಪ್

ಬೆಂಗಳೂರು: ವಿದ್ಯಾರ್ಥಿಗಳನ್ನು ತರಬೇತಿಯೊಂದಿಗೆ ಸಜ್ಜುಗೊಳಿಸುವ ಸಲುವಾಗಿ ಕೋರಮಂಗಲದ ಸಂತ ಫ್ರಾನ್ಸಿಸ್ ಕಾಲೇಜು ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ ಇಂಟರ್ನ್‌ಶಿಪ್ ಕಾರ್ಯಕ್ರಮದಲ್ಲಿ 800ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

'ಉದ್ದಿಮೆ ಮತ್ತು ಸಂಸ್ಥೆಯ ನಡುವೆ ಇರುವ ಅಂತರವನ್ನು ಕಡಿಮೆ ಮಾಡಲು ಈ ಕಾರ್ಯಕ್ರಮ ನೆರವಾಗಲಿದೆ. ಜಾಗತಿಕ ವ್ಯಾಪಾರದ ಅರಿವು ಮೂಡಿಸಲು ಕೂಡ ಈ ವ್ಯವಸ್ಥೆ ಸಹಕಾರಿಯಾಗುತ್ತದೆ. ಕೋವಿಡ್ ಕಾರಣದಿಂದ ಈ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಆಯೋಜನೆ ಮಾಡಿದ್ದೆವು' ಎಂದು ಕಾಲೇಜಿನ ನಿರ್ದೇಶಕ ಸೈಮನ್ ತಿಳಿಸಿದರು. 'ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ನೀಡಲು 95ಕ್ಕೂ ಅಧಿಕ ಬಹುರಾಷ್ಟ್ರೀಯ ಕಂಪನಿಗಳು, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಹಾಗೂ ನವೋದ್ಯಮ ಮುಂದೆ ಬಂದಿದ್ದವು. ವಿದ್ಯಾರ್ಥಿಗಳು ಭವಿಷ್ಯದಲ್ಲಿ ತಮ್ಮ ಉದ್ಯೋಗಕ್ಕೆ ಬೇಕಾದ ಎಲ್ಲ ಕೌಶಲವನ್ನು ವೃದ್ಧಿಸಿಕೊಳ್ಳುತ್ತಿದ್ದಾರೆ' ಎಂದರು.

ಕಾಲೇಜಿನ ಕಾರ್ಯತಂತ್ರದ ಯೋಜನಾ ನಿರ್ದೇಶಕಿ ಸಮೀರಾ ಫೆರ್ನಾಂಡಿಸ್ ಮಾತನಾಡಿದರು.

ಯದುಗಿರಿ ಬೆಟ್ಟದಲ್ಲಿ ಮುಂಜಾನೆ ಮಂಜು ಕವಿದ ವಾತಾವರಣ: ಪ್ರವಾಸಿಗರಲ್ಲಿ ಸಂತಸ

ಮೇಲುಕೋಟೆ: ಮಂಜಿನ ಚಿತ್ತಾರ

ಪ್ರಜಾವಾಣಿ ವಾರ್ತೆ

ಮೇಲುಕೋಟೆ: ಇಲ್ಲಿಯ ಯದುಗಿರಿ ಬೆಟ್ಟದಲ್ಲಿ ಮುಂಜಾನೆ ಮಂಜಿನ ನರ್ತನದ ದೃಶ್ಯವೈಭವ ನೋಡುಗರ ಕಣ್ಣಿಗೆ ಕಟ್ಟುತ್ತಿದೆ. ಚೆಲುವನಾರಾಯಣಸ್ವಾಮಿ ದೇವಾಲಯ, ಯೋಗನರಸಿಂಹಸ್ವಾಮಿ ಬೆಟ್ಟ ಹಾಗೂ ಪಟ್ಟಣದ ರಸ್ತೆಗಳ ಮೇಲೂ ಮಂಜು ಚಾಚಿಕೊಳ್ಳುತ್ತಿದ್ದು, ಚುಮುಚುಮು ಚಳಿ ಕಚಗುಳಿ ನೀಡುತ್ತಿದೆ.

ಪ್ರತಿದಿನ ಹತ್ತು ಅಡಿ ದೂರದ ವಸ್ತುವೂ ಕಾಣದಂತೆ ಮಂಜು ಮುಸುಕುತ್ತದೆ. ಇನ್ನು ಸಂಜೆಯಾಗುತ್ತಿದ್ದಂತೆ ಮಲೆನಾಡಿನಂತೆ ಬಿಟ್ಟೂ ಬಿಡದೆ ಮಳೆ ಸುರಿಯುತ್ತಿದೆ. ಗುರುವಾರ ಮುಂಜಾನೆ 6ರಿಂದ 9-30 ಗಂಟೆಯವರೆಗೂ ಮಂಜು ಹಾಗೆಯೇ ಇತ್ತು.

ಸಾಮಾನ್ಯವಾಗಿ ನವೆಂಬರ್ ಅಂತ್ಯ, ಡಿಸೆಂಬರ್, ಜನವರಿ ತಿಂಗಳಲ್ಲಿ ಆರಂಭವಾಗುತ್ತಿದ್ದ ಚಳಿ ಈ ವರ್ಷ ಅಕ್ಟೋಬರ್‌ನಲ್ಲೇ ಆರಂಭವಾಗಿದೆ. ಚೆಲುವನಾರಾಯಣಸ್ವಾಮಿ ದೇವಾಲಯದ ರಾಜಗೋಪುರ, ನರಸಿಂಹಸ್ವಾಮಿ ಬೆಟ್ಟದ ಮಧ್ಯೆ ಮಂಜಿನಾಟ ನೋಡುವುದೇ ವಿಶಿಷ್ಟ ಅನುಭವ.

ಭಕ್ತರಿಗಂತೂ ಈ ದೃಶ್ಯಗಳು ನಯನ ಮನೋಹರವಾಗಿದೆ. ಬೆಳಗಿನ ವಾಕಿಂಗ್ ಮಾಡುವವರು, ಹಾಲು, ತರಕಾರಿ, ಮಾರುವರರು, ಪತ್ರಿಕಾ ವಿತರಕರು, ದೇವಾಲಯದ ಕೈಂಕರ್ಯಪರರು ಬೆಳ್ಳಂಬೆಳಿಗ್ಗೆ ವಿಶಿಷ್ಟ ಅನುಭವ ಪಡೆಯುತ್ತಿದ್ದಾರೆ.

ಮಂಡ್ಯ ಜಿಲ್ಲೆಯಲ್ಲೇ ಮೇಲುಕೋಟೆಯಲ್ಲಿ ಅತೀ ಹೆಚ್ಚು ಚಳಿ ದಾಖಲಾಗುತ್ತದೆ. ಚಳಿಯ ತೀವ್ರತೆ ಗರಿಷ್ಠ 21 ರಿಂದ ಕನಿಷ್ಠ 18 ಡಿಗ್ರಿಯವರೆಗೂ ತಲುಪುತ್ತದೆ. ಇದಕ್ಕಿಂತಲೂ ಕಡಿಮೆಯಾದ ನಿದರ್ಶನವೂ ಇದೆ. ಧನುರ್ಮಾಸದ ಪೂಜೆಗೆ ಬರುವ ಭಕ್ತರಿಗೆ ಭಕ್ತಿಯ ನಡುವೆ ಚಳಿ ಏನೂ ಇಲ್ಲ ಎನಿಸುತ್ತದೆ.

'ಕಳೆದೆರಡು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಕೆರೆ, ಕಟ್ಟೆ ಕೊಳ ಮತ್ತು ಕಲ್ಯಾಣಿಯಲ್ಲಿ ಹೆಚ್ಚಿನ ನೀರು ತುಂಬಿದೆ. ತೊಟ್ಟಿಲಮಡು ಸಹ ತುಂಬಿ ಹರಿಯುತ್ತಿದೆ. ಇದು ಭಕ್ತರಿಗೆ ಉಲ್ಲಾಸ ನೀಡುತ್ತಿದೆ' ಎಂದು ಪಟ್ಟಣದ ನಾಗರಾಜ್ ತಿಳಿಸಿದರು.

ಮುಖ್ಯಾಂಶಗಳು

- ಮಳೆಯಿಂದ ತುಂಬಿದ ಕೆರೆ, ಕಟ್ಟೆಗಳು
- ಹತ್ತು ಅಡಿ ದೂರದ ವಸ್ತುವೂ ಕಾಣದಂತೆ ಆವರಿಸಿದ ಮಂಜು

ಮೇಲುಕೋಟೆ ಚೆಲುವನಾರಾಯಣಸ್ವಾಮಿಯ ರಾಜಗೋಪರದ ಮೇಲೆ ಮಂಜಿನ ಆನಾವರಣ

ವಾಹನ ಕಳವು ಆರೋಪಿ ಬಂಧನ

ಬೆಂಗಳೂರು: ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ದಕ್ಷಿಣ ವಿಭಾಗದ ಪೊಲೀಸರು ಬಂಧಿಸಿದ್ದು, ಅವರಿಂದ ₹ 6.40 ಲಕ್ಷ ಮೌಲ್ಯದ 16 ದ್ವಿಚಕ್ರ ವಾಹನಗಳಲ್ಲಿ ಜಪ್ತಿ ಮಾಡಿದ್ದಾರೆ.

'ಸೈಯದ್ ರೋಷನ್ ಅಲಿಯಾಸ್ ರಾಕೆಟ್ ಹಾಗೂ ಸೈಯದ್ ಸೈಪಾನ್ ಅಲಿಯಾಸ್ ಸೈಪ್ ಪಾಷಾ ಬಂಧಿತ. ಕದ್ದ ವಾಹನಗಳನ್ನು ಮಾರಾಟ ಮಾಡುತ್ತಿದ್ದ ಆರೋಪಿಗಳು, ಅದರಿಂದ ಬಂದ ಹಣವನ್ನು ಐಷಾ ರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಶಿಕ್ಷಕರ ಮನೆಗೆ ತೆರಳಿ ಮತಯಾಚನೆ

ಪ್ರಜಾವಾಣಿ ವಾರ್ತೆ

ಮಾಗಡಿ: 'ಶಿಕ್ಷಕರ ಹಿತಕಾಯುವಲ್ಲಿ ಪುಟ್ಟಣ್ಣ ಶ್ರಮಿಸುತ್ತಿದ್ದಾರೆ, ಮತ್ತೊಮ್ಮೆ ಅವರ ಗೆಲುವಿಗೆ ಶಿಕ್ಷಕರು ಪಣತೊಟ್ಟಿದ್ದಾರೆ' ಎಂದು ತಾಲ್ಲೂಕು ಅನುದಾನಿತ ಕಾಲೇಜು ಪ್ರಾಂಶುಪಾಲರ ಸಂಘದ ಅಧ್ಯಕ್ಷ ಎಂ.ಸಿ.ಗೋವಿಂದರಾಜು ತಿಳಿಸಿದರು.

ಬಿಜೆಪಿ ಅಭ್ಯರ್ಥಿ ಪುಟ್ಟಣ್ಣ ಪರವಾಗಿ ಗುರುವಾರ ಶಿಕ್ಷಕರ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದರು.

'ರಾಜ್ಯದಲ್ಲಿ ಆಡಳಿತ ಪಕ್ಷದ ಅಭ್ಯರ್ಥಿಯಾಗಿರುವ ಪುಟ್ಟಣ್ಣ, ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಿರತರಾಗಿದ್ದಾರೆ. ಈ ಬಗ್ಗೆ ಅನುದಾನಿತ,ಅನುದಾನರಹಿತ, ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು, ಪ್ರಾಂಶುಪಾಲರು ಮತ್ತು ಶಿಕ್ಷಕರಿಗೆ ಮನವರಿಕೆಯಾಗಿದೆ. ಅನುದಾನ ಕೊಡಿಸುವಲ್ಲಿ ಅವರ ಸೇವೆಯನ್ನು ಮರೆಯುವಂತಿಲ್ಲ. ಮತ್ತೊಮ್ಮೆ ಪುಟ್ಟಣ್ಣ ಜಯಗಳಿಸುವುದು ನೂರಕ್ಕೆ ನೂರು ಸತ್ಯ' ಎಂದರು.

ಪ್ರೌಢಶಾಲಾ ಸಹಶಿಕ್ಷಕರ ಸಂಘದ ಗೌರವಾಧ್ಯಕ್ಷ ಗಂಗಮಾರಯ್ಯ, ಮಂಜುನಾಥ ಭೋವಿ ಪುಟ್ಟಣ್ಣ ಪರವಾಗಿ ಮತಯಾಚಿಸಿದರು. ಶಿಕ್ಷಕರು ಇದ್ದರು.

ಮಾಗಡಿ ಪುಟ್ಟಣ್ಣ ಪರವಾಗಿ ಪ್ರಾಂಶುಪಾಲ ಎಂ.ಸಿ.ಗೋವಿಂದ ರಾಜು ಮತಯಾಚಿಸಿದರು. ಗಂಗಮಾರೇಗೌಡ, ಮಂಜುನಾಥ ಭೋವಿ ಇದ್ದರು.

ಚನ್ನಪಟ್ಟಣದಲ್ಲಿ ಪತ್ರಕರ್ತ ನಾಗರಾಜು ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪತ್ರಕರ್ತರಾದ ರಮೇಶ್ ಗೌಡ, ಲಕ್ಷ್ಮೀಪತಿ, ಗುರುಮೂರ್ತಿ, ನಟರಾಜ್, ಆಕ್ಕೂರು ರಮೇಶ್, ಸಾಧು ರಮೇಶ್, ಚಿನ್ನಗಿರಿಗೌಡ, ಎ.ಟಿ. ವೆಂಕಟೇಶ್, ಶಿವು, ಗೋ.ರಾ.ಶ್ರೀನಿವಾಸ್, ಮೆಂಗಳ್ಳಿ ಮಹೇಶ್ ಇದ್ದರು

ಸುದ್ದಿ 2 ನಿಮಿಷ

ಡಿ.ಕೆ ಸಹೋದರ ವರ್ತನೆಗೆ ಡಿಸಿಎಂ ಆಕ್ಷೇಪ

ಕೋಲಾರ: 'ಸಾರ್ವಜನಿಕ ಜೀವನದಲ್ಲಿ ಆಪಾದನೆ ಸಹಜ. ಪ್ರಶ್ನೆ ಕೇಳಿದಾಗ ಉತ್ತರಿಸಬೇಕು. ಅವನ್ಯಾರು ಎನ್ನುವ ಡಿ.ಕೆ. ಶಿವಕುಮಾರ್ ಮತ್ತು ಡಿ.ಕೆ. ಸುರೇಶ್‌ರ ನಡವಳಿಕೆ ಎಷ್ಟು ಸರಿ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲಿ' ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಕುಟುಕಿದರು.

ಇಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ. 'ನಾನು ಸಣ್ಣ ವ್ಯಕ್ತಿ. ಡಿ.ಕೆ ಸಹೋದರರು ದೊಡ್ಡವರು. ನಕಲಿ ಮತದಾರರ ಗುರುತಿನ ಚೀಟಿ ಸೃಷ್ಟಿ, ಆದಾಯ ತೆರಿಗೆ ವಂಚನೆ ನಡೆಸುವವರೂ ಅವರೇ. ಸುಪ್ರೀಂ ಕೋರ್ಟ್ ನಕಲಿ ಮತದಾರರ ಗುರುತಿನ ಚೀಟಿಗೆ ಸಂಬಂಧಿಸಿದ ಪ್ರಕರಣ ವಜಾಗೊಳಿಸಿದ ನಂತರ ನ್ಯಾಯಾಲಯದ ತೀರ್ಪು ಪ್ರಶ್ನಿಸುವ ಅವರಿಗೆ ಸ್ವಲ್ಪವೂ ತಿಳಿವಳಿಕೆಯಿಲ್ಲ' ಎಂದು ಟೀಕಿಸಿದರು.

'ಡಿ.ಕೆ ಸಹೋದರರು ನಕಲಿ ಮತದಾರರ ಗುರುತಿನ ಚೀಟಿ ಬಗ್ಗೆ ಮತ್ತೆ ಮುಕ್ತವಾಗಿ ಮಾತನಾಡುತ್ತಿದ್ದಾರೆ. ಅವರು ಕಾನೂನು ಉಲ್ಲಂಘಿಸಬಹುದು. ಆದರೆ, ಬೇರೆಯವರು ಉಲ್ಲಂಘನೆ ಮಾಡಿದರೆ ತಪ್ಪು' ಎಂದು ವ್ಯಂಗ್ಯವಾಡಿದರು.

ನೈತಿಕತೆಯಿಲ್ಲ: 'ರಾಜ್ಯದಲ್ಲಿ ಎರಡೂ ವಿರೋಧ ಪಕ್ಷಗಳು ಅವನತಿಯತ್ತ ಸಾಗಿವೆ. ಅವರಲ್ಲಿ ನೈತಿಕತೆಯಿಲ್ಲ. ಕಾಂಗ್ರೆಸ್‌ನಲ್ಲಿ ಆಂತರಿಕ ಕಚ್ಚಾಟ ಹೆಚ್ಚಿದೆ. ಇನ್ನು ಜೆಡಿಎಸ್ ಮುಳುಗುತ್ತಿರುವ ಹಡಗು' ಎಂದು ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ ವಾಗ್ದಾಳಿ ನಡೆಸಿದರು.

'ರಾಜಕಾರಣದಲ್ಲಿ ಎಲ್ಲರಿಗೂ ಅಧಿಕಾರದ ಆಸೆ ಇರುತ್ತದೆ. ಆದರೆ, ಸಂಘಟನೆಯಲ್ಲಿ ಕೆಲಸ ಮಾಡುವಾಗ ಬಹಿರಂಗ ಹೇಳಿಕೆ ನೀಡದೆ ಒಂದೇ ದೃಷ್ಟಿಕೋನದಿಂದ ಸಾಗಬೇಕು. ಉತ್ತರ ಕರ್ನಾಟಕದ ಮುಖ್ಯಮಂತ್ರಿ ಎಂಬ ವಿಷ ಬೀಜ ಬಿತ್ತುವ ಪ್ರಯತ್ನ ಖಂಡನೀಯ. ಯಡಿಯೂರಪ್ಪ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹೆಚ್ಚು ಕಾಳಜಿ ತೋರಿದ್ದಾರೆ' ಎಂದರು.

ಡಿಕೆಶಿಗೆ ಪ್ರತಿಷ್ಠೆಯ ಚುನಾವಣೆ: ಶ್ರೀರಾಮುಲು

ಶಿರಾ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಉಪಚುನಾವಣೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಅವರು ಗೆಲುವಿನ ಹಗಲು ಕನಸು ಕಾಣುತ್ತಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಲೇವಡಿ ಮಾಡಿದರು.

'ಡಿ.ಕೆ.ಶಿವಕುಮರ್ ಅಧ್ಯಕ್ಷರಾದ ನಂತರ ನಡೆಯುತ್ತಿರುವ ಮೊದಲ ಉಪಚುನಾವಣೆಯಾಗಿದೆ. ಇಲ್ಲಿ ಸೋತರೆ ರಾಜ್ಯದಲ್ಲಿ ಸೋತಂತೆ ಎನ್ನುವ ಭಯ ಅವರಲ್ಲಿ ಇದೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ವಿಶ್ಲೇಷಿಸಿದರು. ಶಿರಾ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ಪಕ್ಷದ ಗೆಲುವು ಖಚಿತ ಎಂದರು.

ರಾಜ್ಯ ಸರ್ಕಾರ ನೆರೆ ಸಮಸ್ಯೆಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆ. ಕೇಂದ್ರ ಸರ್ಕಾರ ಪ್ರವಾಹ ಸಮಸ್ಯೆಯನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು ಎಂದು ರಾಮುಲು ಅವರು ಆಗ್ರಹಿಸಿದರು.

ಪಬ್ ಬೌನ್ಸರ್ ವಿರುದ್ಧ ದೂರು

ಬೆಂಗಳೂರು: 'ಬಾಣಸವಾಡಿಯ ಪೆರ್ಲಾಕ್ಸ್ ಪಬ್‌ನ ಬೌನ್ಸರ್‌ಗಳು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ತರುಣ್ ಎಂಬುವರು ಬಾಣಸವಾಡಿ ಠಾಣೆಗೆ ದೂರು ನೀಡಿದ್ದಾರೆ.

'ಅ. 17ರಂದು ಸ್ನೇಹಿತರ ಜೊತೆ ಪಬ್‌ಗೆ ಹೋಗಿದ್ದೆ. ಮದ್ಯ ಸೇವಿಸಿ ಊಟ ಮಾಡಿ ಹೊರಗಡೆ ಬಂದು ಸಿಗರೇಟ್ ಸೇದುತ್ತಿದೆ. ಅಲ್ಲಿ ಯಾವುದೇ 'ಧೂಮಪಾನ ನಿರ್ಬಂಧಿತ ಪ್ರದೇಶ' ಫಲಕ ಇರಲಿಲ್ಲ. ಅಷ್ಟಾದರೂ ನನ್ನನ್ನು ಪ್ರಶ್ನಿಸಿದ್ದ ಮೂವರು ಬೌನ್ಸರ್‌ಗಳು, ನನ್ನ ಮೇಲೆ ಹಲ್ಲೆಮಾಡಿದರು. ಬೂಟು ಕಾಲಿನಿಂದ ಒದ್ದರು. ಕೈ, ಕಾಲು, ದವಡೆಗೆ ತೀವ್ರ ಗಾಯವಾಗಿದೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಸಲಾಗಿದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಪಬ್ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ತರುಣ್ ಒತ್ತಾಯಿಸಿದ್ದಾರೆ.

ಹಿರಿಯ ನಾಗರಿಕರ ದಿನಾಚರಣೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಹಿರಿಯ ನಾಗರಿಕರನ್ನು ಗೌರವದಿಂದ, ಪೂಜ್ಯ ಭಾವನೆಯಿಂದ ಕಾಣುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಯಾರಮಾಲ್ ಕಲ್ಪನಾ ಅಭಿಪ್ರಾಯ ಪಟ್ಟರು.

ಪಟ್ಟಣದ ನ್ಯಾಯಾಲಯದ ಸಭಾಂಗಣದಲ್ಲಿ ತಾಲ್ಲೂಕು ಕಾನೂನು ಸೇವೆಗಳ ಸಮಿತಿ, ತಾಲ್ಲೂಕು ವಕೀಲರ ಸಂಘ, ಆರೋಗ್ಯ ಇಲಾಖೆ ಸಂಯುಕ್ತಾಶ್ರಯದಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಹಾಗೂ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಿರಿಯರನ್ನು ಮೂಲೆಗುಂಪು ಮಾಡದೇ, ಗುಣಗಳಿಗೆ ಬೆಲೆ ಕೊಡಬೇಕು ಎಂದು ಕಿವಿಮಾತು ಹೇಳಿದರು.

ಸಿವಿಲ್ ನ್ಯಾಯಾಧೀಶ ಎಂ.ಮಹೇಂದ್ರ ಮಾತನಾಡಿ, 'ಪ್ರತಿಯೊಬ್ಬರಿಗೂ ಹಿರಿಯರ ಮಾರ್ಗದರ್ಶನ ಅವಶ್ಯಕ. ಪ್ರತಿಯೊಬ್ಬರು ವೃದ್ಧರಾಗಲೇಬೇಕು ಎಂಬುದನ್ನು ಅರಿತುಕೊಳ್ಳಬೇಕು. ವೃದ್ಧರೆಂಬ ಕಾರಣಕ್ಕೆ ಅವರನ್ನು ಕೀಳುದೃಷ್ಟಿಯಿಂದ ಕಾಣುವುದು ಕಾನೂನಿನ ಪ್ರಕಾರ ಅಪರಾಧ ಎಂದು ಹೇಳಿದರು.

ಜಿಲ್ಲಾ ಮಾನಸಿಕ ಆರೋಗ್ಯ ತಜ್ಞ ಡಾ. ಆದರ್ಶ ಮಾತನಾಡಿ, 'ಪ್ರಸಕ್ತ ಸಮಾಜದಲ್ಲಿ ಆತ್ಮಹತ್ಯೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮನುಷ್ಯನ ಸಮಸ್ಯೆಗಳಿಗೆ ಸಾವು ಒಂದೇ ಪರಿಹಾರವಲ್ಲ. ಹಲವು ಆತ್ಮಹತ್ಯೆಗಳು ಮಾನಸಿಕ ಖಿನ್ನತೆಯಿಂದ ಆಗಿವೆ. ಮಾನಸಿಕವಾಗಿ ಖಿನ್ನತೆಗೆ ಒಳಗಾಗುವವರನ್ನು ಪೋಷಕರು ಎಚ್ಚರದಿಂದ ಗಮನಿಸಬೇಕು' ಎಂದು ಹೇಳಿದರು.

ವಕೀಲರ ಸಂಘದ ಅಧ್ಯಕ್ಷ ಟಿ.ವಿ. ಗಿರೀಶ್, ಸರ್ಕಾರಿ ಅಭಿಯೋಜಕ ವೀರಭದ್ರಯ್ಯ, ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಲೋಕೇಶ್, ವಕೀಲ ಹೇಮಂತ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ರಾಜು ಇದ್ದರು.

ಚನ್ನಪಟ್ಟಣದ ನ್ಯಾಯಾಲಯದ ಸಭಾಂಗಣದಲ್ಲಿ ನಡೆದ ವಿಶ್ವ ಹಿರಿಯ ನಾಗರೀಕರ ದಿನಾಚರಣೆಯನ್ನು ಯಾರಮಾಲ್ ಕಲ್ಪನಾ ಉದ್ಘಾಟಿಸಿದರು

ರಾಮನಗರದಲ್ಲಿ ಬಿಜೆಪಿ ಅಭ್ಯರ್ಥಿ ಪುಟ್ಟಣ್ಣ ಪರವಾಗಿ ಅನುದಾನರಹಿತ ಶಾಲಾ ಒಕ್ಕೂಟದ ಪದಾಧಿಕಾರಿಗಳು ಮತಯಾಚಿಸಿದರು.

ಅನುದಾನರಹಿತ ಶಾಲಾ ಮಂಡಳಿಯಿಂದ ಪ್ರಚಾರ

ಪ್ರಜಾವಾಣಿ ವಾರ್ತೆ

ರಾಮನಗರ: ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪುಟ್ಟಣ್ಣ ಪರ ಜಿಲ್ಲಾ ಅನುದಾನರಹಿತ ಶಾಲಾ ಆಡಳಿತ ಮಂಡಳಿ ಒಕ್ಕೂಟದ ಪದಾಧಿಕಾರಿಗಳು ನಗರದಲ್ಲಿ ಗುರುವಾರ ಪ್ರಚಾರ ನಡೆಸಿದರು.

ಈ ವೇಳೆ ಮಾತನಾಡಿದ ಒಕ್ಕೂಟದ ಜಿಲ್ಲಾಧ್ಯಕ್ಷ ಪಟೇಲ್.ಸಿ,ರಾಜು ಅವರು, 'ಪಕ್ಷ ನೋಡದೆ, ವ್ಯಕ್ತಿಯನ್ನು ನೋಡಿ, ಪಕ್ಷಾತೀತವಾಗಿ ಒಕ್ಕೂಟದಿಂದ ಪುಟ್ಟಣ್ಣ ಪರವಾಗಿ ಮತಯಾಚಿಸುತ್ತಿದ್ದೇವೆ. ಎಲ್ಲಾ ಖಾಸಗಿ ಶಾಲೆಗಳಿಗೆ ಭೇಟಿ ನೀಡಿ ಮತ ಹಾಕುವಂತೆ ಕೇಳಿಕೊಳ್ಳುತ್ತಿದ್ದೇವೆ. ಶುಕ್ರವಾರ ಕನಕಪುರ ಮತ್ತು ಶನಿವಾರ ಮಾಗಡಿಯಲ್ಲಿ ಮತಯಾಚನೆ ಮಾಡಲಿದ್ದೇವೆ' ಎಂದರು.

'ಶಿಕ್ಷರಕ ಒಲವು ಕೂಡ ಪುಟ್ಟಣ್ಣ ಪರವಾಗಿಯೇ ಇದೆ. ಅವರ ಬಗ್ಗೆ ಉತ್ತಮ ಅಭಿಪ್ರಾಯ ಕೇಳಿ ಬರುತ್ತಿದೆ. ಪುಟ್ಟಣ್ಣ ಅವರು ಕೇವಲ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ರಾಜ್ಯಕ್ಕೆ ಮೀಸಲಾಗಿದ್ದಾರೆ. ಇವರ ಗೆಲುವಿಗಾಗಿ ಎಲ್ಲರೂ ಒಗ್ಗೂಡಿ ಬೆಂಬಲಿಸಲು ತೀರ್ಮಾನಿಸಿದ್ದೇವೆ' ಎಂದರು.

ಒಕ್ಕೂಟದ ಉಪಾಧ್ಯಕ್ಷ ಪ್ರದೀಪ್ ಕುಮಾರ್, ಖಜಾಂಚಿ ಬಾಲಗಂಗಾಧರ್ ಮೂರ್ತಿ, ನಿರ್ದೇಶಕ ಅಲ್ತಾಫ್ ಅಹಮ್ಮದ್ ಮತ್ತು ಪದಾಧಿಕಾರಿಗಳು ಇದ್ದರು.

ಸೈಬರ್ ವಂಚಕರಿಗೆ ಸಿಮ್ ವಿತರಕರ ಸಹಕಾರ

ಬೆಂಗಳೂರು: ಐಎಎಸ್, ಐಪಿಎಸ್ ಹಾಗೂ ಇತರೆ ಅಧಿಕಾರಿಗಳ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳನ್ನು ತೆರೆದು ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಸೈಬರ್ ವಂಚಕರಿಗೆ, ಸಿಮ್ ಕಾರ್ಡ್ ವಿತರಕರು ಸಹಕಾರ ನೀಡಿದ್ದ ಸಂಗತಿ ಸ